MR. DEPUTY SPEAKER.—The information may be furnished tomorrow.

ಶ್ರೀ ಆಶ್ವತ್ಥ ರೆಡ್ಡಿ.—೧.೮ ಮಿಲಿಯನ್ ಯೂನಿಟ್ಸ್ ಬರುತ್ತದಲ್ಲಾ ಅದನ್ನು ಇಲ್ಲೇ ರೀಡಿಂಗ್ ತೆಗೆದುಕೊಂಡಿರುವುದು. They might have supplied two million units. There might be loss.

SRI K. BHASKAR NAIDU.—If the Hon. Minister has not information, let him give tomorrw.

SRI G. ASHWATHA REDDY.—They may be supplying more than 1.8 million units.

SRI D. DEVARAJ URS —Let the Hon. Minister understand the point. Now you have said that you are getting 1.8 millions at the the border. Am I correct ? Supposing they say that we are giving whatever has been agreed i.e., 2.2, the simple calculation will be 2.2 minus 1.8, that will be the transmission loss. Is that correct or is it something less or are they also supplying less than that ex. Idukki Now, I think I am clear.

ಶ್ರೀ ಆಶ್ವತ್ಥ ರೆಡ್ಡಿ.—೨.೨ ನಮ್ಮ ಕರ್ನಾಟಕ ಬಾರ್ಡರ್‌ಗೆ ಕೊಡಬೇಕೆಂದು ಕಂಡೀಷನ್ ಹಾಕಿದ್ದವು. ಕರ್ನಾಟಕ ಬಾರ್ಡರ್‌ಗೆ ಮೊದಲು ೧.೬ ಕೊಡುತ್ತಿದ್ದರು. ಆ ಮೇಲೆ ನಾನು ಹೋದಮೇಲೆ ನಮ್ಮ ಕರ್ನಾಟಕ ಬಾರ್ಡರ್‌ನಲ್ಲಿ ೨.೨ ಮಿಲಿಯನ್ ಯೂನಿಟ್ಸ್, ಏನು ೩ ಮಿಲಿಯನ್ ಯೂನಿಟ್ಸ್ ಕೊಡಬೇಕೆಂದು ನಾವು ಕೇಳಿದ್ದೇವೆ. ಈಗ ೧.೮ ನಮ್ಮ ಬಾರ್ಡರ್‌ಗೆ ಬರುತ್ತಿದೆ. ಆದರೆ ನೀವು ಹೇಳಿದ ಪ್ರಕಾರ, ೪೫% ಟ್ರಾನ್ಸ್‌ಮಿಷನ್ ಲಾಸ್ ಆಗಿರಂವುದಿಲ್ಲ. ೧೦ ಪರ್ಸೆಂಟ್ ಆಗಬಹುದು.

SRI D. DEVARAJ URS.—The Minister is again and again repeating the same thing. It my be 10% or 8% of 25% ... ...

MR. DEPUTY SPEAKER.—Please supply information tomorrow

SRI ASHWATHA REDDY.—I will give correct information

MR. DEPUTY SPEAKER.—Next item, presentation of petitions.

ಮನವಿಯನ್ನೊಪ್ಪಿಸುವುದು

ಶ್ರೀ ಆರ್. ಪಿ ಬಾಳಿಕುಂದಗಿ.—ಮಾನ್ಯ ಅಧ್ಯಕ್ಷರೆ, ಈ ಮನವಿಗಳನ್ನು ಅರ್ಪಿಸುವ ಸಂದರ್ಭದಲ್ಲಿ ಒಂತ್ತೊಂದು ಮನವಿಯನ್ನು ನಾನು ಅರ್ಪಿಸಬೇಕಾಗಿದೆ ಏನೆಂದರೆ, ಕನ್ನಡವನ್ನು ಅಧಿಕೃತ ಭಾಷೆ ಎಂದು ನಮ್ಮ ಹಿಂದಿನ ಸರ್ಕಾರದವರು ಘೋಷಣೆಮಾಡಿದ್ದಾರೆ. ನಾವು ನಮ್ಮ ಮನವಿ ಪತ್ರವನ್ನು ಕನ್ನಡದಲ್ಲಿ ಕೊಟ್ಟಿದ್ದರೂ ಕೂಡ ಅವು ಇಂಗ್ಲೀಷ್‌ನಲ್ಲೇ ಬರುತ್ತಿವೆ. ನಮ್ಮಲ್ಲಿ ಅನೇಕ ಸದಸ್ಯರಿಗೆ ಇಂಗ್ಲೀಷ್ ಬರುವುದಿಲ್ಲ. ಕನ್ನಡದಲ್ಲಿ ಕೊಟ್ಟ ಮನವಿಗಳ ವಿಚಾರವನ್ನು ಇಂಗ್ಲೀಷ್‌ಗೆ ಭಾಷಾಂತರ ಮಾಡಿದಾಗ ಕೆಲವು ಸಂದರ್ಭಗಳಲ್ಲಿ ಅನೇಕ ಪ್ರಮಾದಗಳು ಆಗುವ ಸಂಭವ ಇದೆ. ಏಕೆಂದರೆ ನಮಗೆ ಪ್ರಾಥಮಿಕ ಆರೋಗ್ಯ ಘಟಕವನ್ನು ಕೊಡಬೇಕೆಂದು ನಾವು ಕೇಳಿದ್ದೇವೆ. ಆದರೆ ಇಲ್ಲಿ ಪ್ರೈಮರಿ ಹೆಲ್ತ್ ಸೆಂಟರ್ ಎಂದು ಭಾಷಾಂತರವಾಗಿದೆ. ಪ್ರೈಮರಿ ಹೆಲ್ತ್ ಸೆಂಟರ್‌ಗೂ, ಮತ್ತು ಪ್ರೈಮರಿ ಹೆಲ್ತ್ ಯೂನಿಟ್‌ಗಳ ಬಹಳ ವ್ಯತ್ಯಾಸವಿದೆ. ಆದ್ದರಿಂದ ಸದಸ್ಯರು ಕೊಡಬಹುದಾದ ಮನವಿಗಳನ್ನು ಕನ್ನಡದಲ್ಲಿಯೇ ಪ್ರಿಂಟ್ ಮಾಡಿಸಿ ಕೊಡುವಂತೆ ವ್ಯವಸ್ಥೆ ಮಾಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಮತ್ತು ಸದಸ್ಯರ ಹಕ್ಕುಬಾಧ್ಯತೆಗಳು ಏನಿವೆ ಅವುಗಳನ್ನು ಮೊಟಕು ಮಾಡಬಾರದೆಂದು ವಿನಂತಿಮಾಡಿಕೊಳ್ಳುತ್ತೇನೆ.

ಉಪಾಧ್ಯಕ್ಷರು. ಕನ್ನಡ ಮತ್ತು ಇಂಗ್ಲೀಷ್ ಎರಡರಲ್ಲೂ ಒದಗಿಸುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಆರ್. ಸಿ. ಬಾಳೆಕುಂದಗಿ.—ಸ್ವಾಮಿ, ನಾನು ಅರ್ಪಿಸಲಿರುವ ಮನವಿಪತ್ರಗಳು ಈ ರೀತಿ ಇವೆ.

೧) ಬೈಲಹೊಂಗಲ ತಾಲೂಕಿನ ಬೆಳವಾಡಿ ಗ್ರಾಮದ ಹತ್ತಿರ ಹಳ್ಳಕ್ಕೆ ಸೇತುವೆ ನಿರ್ಮಾಣದ ಬಗ್ಗೆ ಬೆಳವಾಡಿ ಗ್ರಾಮದ ಜನರು ಮಾಡಿಕೊಂಡ ಮನವಿ ಪತ್ರವನ್ನು ಅರ್ಪಿಸುತ್ತೇನೆ.

೨) ಸವದತ್ತಿ ತಾಲೂಕಿನ ಚಚಡಿ ಗ್ರಾಮದ ಸರಪಂಚರು ಹಾಗೂ ನಾಗರೀಕರು ಚಚಡಿ ಗ್ರಾಮಕ್ಕೆ ಪ್ರಾಥಮಿಕ ಆರೋಗ್ಯ ಘಟಕವನ್ನು ಒದಗಿಸಿ ಕೊಡಬೇಕೆಂದು ಕೇಳುವ ಮನವಿಪತ್ರವನ್ನು ಅರ್ಪಿಸುತ್ತೇನೆ.

ಶ್ರೀಮತಿ ಅನುಸೂಯ ಗಜಾನನ ಶರ್ಮ.—ಮಾನ್ಯ ಉಪಾಧ್ಯಕ್ಷರೆ, ನನ್ನ ಹೆಸರಿನಲ್ಲಿರುವ ಎರಡು ಮನವಿಪತ್ರಗಳನ್ನು ಅರ್ಪಿಸುವುದಕ್ಕೆ ಬಯಸುತ್ತೇನೆ.

MR. DEPUTY SPEAKER.—Petitions presented. Now Legislative business.

LEGISLATIVE BUSINESS

Karnataka Local Authorities Official Language (Amendment) Bill 1981

Discussion is over on the Karnataka Local Authorities Official Language (Amendment) Bill 1981. Now the Hon. Law Minister may reply

SRI B. B. SAYANAK.—Sir, I have not concluded my speech.

MR. DEPUTY SPEAKER.—You have taken enough time. Please resume your seat.

ಶ್ರೀ ವೈ. ರಾಮಕೃಷ್ಣ.—ಸನ್ಮಾನ್ಯ ಸಭಾಧ್ಯಕ್ಷರೆ, ಈ ಸಭೆಯಮುಂದೆ ಮಂಡಿಸಿರತಕ್ಕ ಮಸೂದೆಯ ಮೇಲೆ ಅನೇಕಮಂದಿ ಸದಸ್ಯರುಗಳು ಸಾಕಷ್ಟು ಬೆಳಕನ್ನು ಚೆಲ್ಲಿದ್ದಾರೆ. ವಿವಿಧರೀತಿಯ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಕೆಲವರು ತಮ್ಮ ಆತಂಕವನ್ನು ವ್ಯಕ್ತಪಡಿಸುತ್ತಾ ಇದು ಬಹಳ ನಿಧಾನವಾಯಿತು ಎಂದು ಹೇಳಿದರು. ಇನ್ನೂ ಕೆಲವು ಮಾನ್ಯ ಸದಸ್ಯರುಗಳು ಬಹಳ ಅಮೂಲ್ಯವಾದ ಸಲಹೆಗಳನ್ನು ನೀಡಿದ್ದಾರೆ. ಅದಕ್ಕೋಸ್ಕರ ನಾನು ಅವರೆಲ್ಲರಿಗೂ ಸರ್ಕಾರದ ಪರವಾಗಿ ವಂದನೆಗಳನ್ನರ್ಪಿಸುತ್ತೇನೆ. ಆದರೆ ಭಾಷಣ ಮಾಡುವಾಗ ಕೆಲವು ಸದಸ್ಯರುಗಳು ಸಲಹೆಗಳನ್ನು ಕೊಡುವುದರ ಜೊತೆಗೆ ಕೆಲವಾರು ಮಾತುಗಳನ್ನೂ ಆಡಿದರು ಆದರಲ್ಲಿ ಒಬ್ಬಿಬ್ಬರು ಮಾತ್ರ ಬಹಳ ತೀವ್ರ ಸ್ವರೂಪದಲ್ಲಿ ಮಾತನಾಡಿದರು. ಆದ್ದರಿಂದ ಅವರಿಗೆ ನಾನು ಉತ್ತರವನ್ನು ಕೊಡಬೇಕಾಗುತ್ತದೆ.

ಮೊದಲನೆಯದಾಗಿ, ಮಾನ್ಯ ಸದಸ್ಯರಾದ ಶ್ರೀ ಶ್ರೀನಿವಾಸ್‌ರವರು ಮಾತನಾಡುತ್ತಾ ಕನ್ನಡವು ಆಡಳಿತ ಭಾಷೆಯಾಗಬೇಕಾದರೆ ಮುಖ್ಯವಾಗಿ ಪ್ರದ್ಧೆ ಬೇಕು, ತೊಡಕುಗಳನ್ನು ನಿವಾರಿಸುವ ಪ್ರಯತ್ನ ಮಾಡಬೇಕು, ಆದರೆ ಇವೆರಡೂ ಇಲ್ಲವೆಂದು ಹೇಳಿದರು. ಅದು ಸರಿಯಲ್ಲ. ಇವೆರಡೂ ನಮ್ಮಲ್ಲಿದೆ ಎಂಬುದಕ್ಕೆ ಅನೇಕ ಉದಾಹರಣೆಗಳನ್ನು ಕೊಡುತ್ತೇನೆ. ಆದರೆ ಕಡೆಯಲ್ಲಿ ಒಂದು ರಾಜಕೀಯ ಪದವನ್ನು ಸೇರಿಸಿದರು.

ಶ್ರೀ ಕೆ. ಎಚ್. ಶ್ರೀನಿವಾಸ್.—ನಿಮಗೆ ಇದು ಇಲ್ಲವೆಂದು ಹೇಳಲಿಲ್ಲ. ತಾವು ತರತಕ್ಕಂಥ ತಾಸನ ಜಾಗ್ರತೆಯಾಗಿ ಜಾರಿಗೆ ಬರುವಂಥ ಪ್ರಯತ್ನ ಮಾಡಿ ಎಂದು ಹೇಳಿದೆ.

† ಶ್ರೀ ವೈ. ರಾಮಕೃಷ್ಣ.—ತಾವು ಹೇಳಿದಿರಿ. ಹಾಗೆನೇ ಶ್ರೀಮಾನ್ ಕೊಡಗಿಯವರು ಮಾತನಾಡುತ್ತಾ ನಿಮ್ಮ ತತ್ವವನ್ನು ಒಪ್ಪುತ್ತೇನೆ, ಆದರೆ ಅಷ್ಟೇ ಅಲ್ಲ ಅದನ್ನು ಅನುಷ್ಠಾನಕ್ಕೆ ತರುವ